## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2047
ಸದಸ್ಯರ ಹೆಸರು : ಶ್ರೀ ಸಿ.ಎನ್ ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ಉತ್ತರಿಸುವ
ದಿನಾಂಕ : 17.03.2022.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಸಾಂಸ್ಕೃತಿಕ ಮತ್ತು ಅರಮನೆಗಳ ನಗರಿ ಮೈಸೂರಿನಲ್ಲಿ ಚಿತ್ರ ನಗರಿ (ಫಿಲಂ ಸಿಟಿ) ನಿರ್ಮಿಸಲು ಈ ಹಿಂದೆ ಯೋಜನೆಯನ್ನು ರೂಪಿಸಲಾಗಿತ್ತೇ; ಹಾಗಿದ್ದಲ್ಲಿ, ಈ ಯೋಜನೆಯು ಯಾವ ಹಂತದಲ್ಲಿದೆ (ವಿವರ ನೀಡುವುದು) | 2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಪಿ.ಪಿ.ಪಿ. ಮಾದರಿಯಲ್ಲಿ ವಾರ್ತಾ ಇಲಾಖೆಯು ವತಿಯಿಂದ ಮೈಸೂರಿನಲ್ಲಿ ಚಲನಚಿತ್ರ ನಗರಿಯನ್ನು ನಿರ್ಮಿಸಲಾಗುವುದೆಂದು ಘೋಷಿಸಲಾಗಿತ್ತು. ಕಂದಾಯ ಇಲಾಖೆಯ ಆದೇಶ ಸಂಖ್ಯೆ: ಆರ್.ಡಿ. 90 ಎಲ್.ಜಿ.ಎಂ. 2014 ದಿನಾಂಕ: 17-10-2015 ರ ಪ್ರಕಾರ ಮೈಸೂರು ಜಿಲ್ಲೆ ನಂಜನಗೂಡು ತಾ: ಇಮ್ಮಾವು ಗ್ರಾಮದ ಸರ್ವೆ ನಂ.377 ಮತ್ತು ಇತರೆ ಸರ್ವೆ ನಂ.ಗಳಲ್ಲಿನ ಒಟ್ಟು 110-08 ಎಕರೆ ಜಮೀನನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಾರುಕಟ್ಟೆ ಬೆಲೆಯ ಶೇ. 10ರಷ್ಟು ಗುತ್ತಿಗೆ ದರವನ್ನು ಹೆಚ್ಚಿಸುವ ಮತ್ತು ಪ್ರತಿ 2 ವರ್ಷಗಳಿಗೊಮ್ಮೆ ಶೇ. 5 ರಷ್ಟು ಬೆಲೆಯನ್ನು ಹೆಚ್ಚಿಸುವುದು ಹಾಗೂ ಇತರೆ ಷರತ್ತುಗಳನ್ನು ವಿಧಿಸಿ ಚಿತ್ರ ನಗರಿ ಸ್ಥಾಪಿಸುವುದಕ್ಕಾಗಿ ವಾರ್ತಾ ಇಲಾಖೆಗೆ ಮಂಜೂರು ಮಾಡಲಾಗಿದೆ. ನಂತರದಲ್ಲಿ ಚಿತ್ರ ನಗರಿಯನ್ನು ಪ್ರವಾಸೋದ್ಯಮ ಇಲಾಖೆಯು ಅಭಿವೃದ್ಧಿ ಪಡಿಸುವುದರಿಂದ ಚಿತ್ರ ನಿರ್ಮಾಣದ ಜೊತೆಗೆ ಪ್ರವಾಸೋದ್ಯಮ ಹೋಟೇಲು, ಮನೋರಂಜನೆ ಅಳವಡಿಸಿಕೊಂಡು ಸರ್ಕಾರದ ವತಿಯಿಂದ ಅಥವಾ ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲು ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರಿಸಲಾಗಿದೆ.<br>ನಂತರದಲ್ಲಿ 2020-21ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 247ರಲ್ಲಿ ಬೆಂಗಳೂರಿನಲ್ಲಿ ಚಿತ್ರನಗರಿ ಕಟ್ಟಲು ಘೋಷಿಸಲಾಗಿದ್ದು, ಬೆಂಗಳೂರಿನಲ್ಲಿ ಸೂಕ್ತ ಜಮೀನು ಲಭ್ಯವಾಗದ ಕಾರಣ, ಮೈಸೂರಿನಲ್ಲೇ ಚಿತ್ರನಗರಿಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ಪಿ.ಪಿ.ಪಿ. ಮಾದರಿಯಲ್ಲಿ ಅಭಿವೃದ್ಧಿಪಡಿಸಲು ತೀರ್ಮಾನಿಸಲಾಗಿದ್ದು, ಪ್ರವಾಸೋದ್ಯಮ ಇಲಾಖೆಯಿಂದ ಸದರಿ ಯೋಜನೆಯನ್ನು ಹಿಂಪಡೆಯಲಾಗಿದೆ. ಚಿತ್ರನಗರಿಗಾಗಿ ಈಗಾಗಲೇ ಕಂದಾಯ ಇಲಾಖೆಯ ಆದೇಶ ಸಂಖ್ಯೆ: ಆರ್.ಡಿ. 90 ಎಲ್.ಜಿ.ಎಂ. 2014 ದಿನಾಂಕ: 17-10-2015 ರ ಪ್ರಕಾರ ಮೈಸೂರು ಜಿಲ್ಲೆ ನಂಜನಗೂಡು ತಾ: ಇಮ್ಮಾವು ಗ್ರಾಮದ ಸರ್ವೆ ನಂ.377 ಮತ್ತು ಇತರೆ ಸರ್ವೆ ನಂ.ಗಳಲ್ಲಿನ ಒಟ್ಟು 110-08 ಎಕರೆ ಜಮೀನನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಿರುವ ಜಮೀನನ್ನು ಉಚಿತವಾಗಿ ನೀಡುವಂತೆ ಕಂದಾಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಪರಿಶೀಲನೆಯಲ್ಲಿರುತ್ತದೆ. |
| ಆ) | ಈ ಫಿಲಂ ಸಿಟಿಯನ್ನು ನಿರ್ಮಿಸಲು ಮೈಸೂರಿನಲ್ಲಿ ಈಗಾಗಲೇ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವ ಸರ್ಕಾರದ ಎಲ್ಲಾ ಪ್ರಕ್ರಿಯೆಗಳು ಮುಗಿದಿವೆಯೇ; ಇಲ್ಲದಿದ್ದಲ್ಲಿ, ಸರ್ಕಾರ ಏಕೆ ವಿಳಂಬ ಧೋರಣೆ ಅನುಸರಿಸುತ್ತಿದೆ; (ವಿವರವನ್ನು ನೀಡುವುದು) | ಚಿತ್ರನಗರಿಗಾಗಿ ಕಂದಾಯ ಇಲಾಖೆಯ ಆದೇಶ ಸಂಖ್ಯೆ: ಆರ್.ಡಿ. 90 ಎಲ್.ಜಿ.ಎಂ. 2014 ದಿನಾಂಕ: 17-10-2015 ರಲ್ಲಿ ಮೈಸೂರು ಜಿಲ್ಲೆ ನಂಜನಗೂಡು ತಾ: ಇಮ್ಮಾವು ಗ್ರಾಮದ ಸರ್ವೆ ನಂ.377 ಮತ್ತು ಇತರೆ ಸರ್ವೆ ನಂ.ಗಳಲ್ಲಿನ ಒಟ್ಟು 110-08 ಎಕರೆ ಜಮೀನನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲಾಗಿದೆ. ಸದರಿ ಜಮೀನನ್ನು ಉಚಿತವಾಗಿ ನೀಡುವಂತೆ ಕಂದಾಯ ಇಲಾಖೆಯನ್ನು ಕೋರಲಾಗಿದ್ದು, ಕಂದಾಯ ಇಲಾಖೆಯು ಪರಿಶೀಲಿಸುತ್ತಿದೆ. |

| | | |
|---|---|---|
| ಇ) | ಈ ಫಿಲಂ ಸಿಟಿಯನ್ನು ನಿರ್ಮಿಸಲು ಈ ಹಿಂದಿನ ಸರ್ಕಾರ ಎಷ್ಟು ಕೋಟಿಗಳ ಹಣವನ್ನು ಕಾಯ್ದಿರಿಸಿತ್ತು; ಈ ಅನುದಾನವನ್ನು ಈಗಾಗಲೇ ಬಳಕೆ ಮಾಡಿಕೊಂಡು ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ; (ವಿವರ ನೀಡುವುದು) | ಚಿತ್ರನಗರಿಯ ನಿರ್ಮಾಣಕ್ಕಾಗಿ ಸಾರ್ವಜನಿಕ ಮತ್ತು ಖಾಸಗಿ ಸಹ ಭಾಗಿತ್ವದ (ಪಿಪಿಪಿ) ಆಧಾರದ ಮೇರೆಗೆ ರೂ.500.00 ಕೋಟಿಗಳ ವೆಚ್ಚದಲ್ಲಿ ಕ್ರಮವಹಿಸಲು ಯೋಜಿಸಲಾಗಿದ್ದು, ಸರ್ಕಾರ ತನ್ನ ಪಾಲಿನ ಜಮೀನು ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಲಿದೆ. ಕೋವಿಡ್ ಹಾಗೂ ಇನ್ನಿತರೆ ಕಾರಣಗಳಿಂದಾಗಿ ಈ ಪ್ರಕ್ರಿಯೆ ವಿಳಂಬವಾಗಿದೆ. |
| ಈ) | ಸರ್ಕಾರವು ಈ ಫಿಲಂ ಸಿಟಿ ಯೋಜನೆಯನ್ನು ಕೈಗೆತ್ತಿಕೊಂಡು ಪ್ರಾರಂಭ ಮಾಡದಿದ್ದಲ್ಲಿ, ಯಾವಾಗ ಪ್ರಾರಂಭ ಮಾಡಲಾಗುವುದು? (ವಿವರಿಸುವುದು) | ಪ್ರಸ್ತುತ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಕಂದಾಯ ಇಲಾಖೆಯಿಂದ ಮಂಜೂರಾಗಿರುವ ಜಮೀನನ್ನು ಉಚಿತವಾಗಿ ಹಸ್ತಾಂತರಿಸಕೊಳ್ಳುವ ಬಗ್ಗೆ, ಆಡಳಿತಾತ್ಮಕ ಕ್ರಮ ಪ್ರಗತಿಯಲ್ಲಿದೆ. |

ಸಂಖ್ಯೆ: ಕಸಿಇ-ಪಿಐಪಿ/73/2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ